ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಕಡತವನ್ನೂ ಕಳುಹಿಸಿಕೊಡುತ್ತೇನೆ. ಮತ್ತು ನಿಯಮ 69ರಡಿಯಲ್ಲಿ.. ....

(ಗೊಂದಲ)

ಅಧ್ಯಕ್ಷರು : ಈಗ ಸಮಯ ಇಲ್ಲವೆಂದು ಉಳಿದಿರುವ ಕಲಾಪಗಳೆಲ್ಲವನ್ನೂ ಮುಂದಕ್ಕೆ ಹಾಕುತ್ತಿದ್ದೇವೆ. ಈಗ ಕ್ಲೋಸ್ ಮಾಡೋಣ. ಒಬ್ಬರಿಗೆ ಮಾತನಾಡಲು ಅವಕಾಶ ಕೊಟ್ಟರೆ ಎಲ್ಲರಿಗೂ ಕೊಡಬೇಕಾಗುತ್ತದೆ.

ಈಗ 13ನೇ ವಿಧಾನಸಭೆಯ ಮೂರನೇ ಅಧಿವೇಶನ ಕಾರ್ಯ ಕಲಾಪಗಳ ಸಂಕ್ಷಿಪ್ತ ವರದಿಯನ್ನು ಓದುತ್ತೇನೆ.

ಹದಿಮೂರನೇ ವಿಧಾನಸಭೆಯ ಮೂರನೇ ಅಧಿವೇಶನವು ದಿನಾಂಕ: 9ನೇ ಜುಲೈ, 2009 ರಿಂದ ದಿನಾಂಕ: 29ನೇ ಜುಲೈ, 2009 ರವರೆಗೆ ಸಮಾವೇಶಗೊಂಡು, ಒಟ್ಟು 15 ದಿನಗಳಲ್ಲಿ 70 ಗಂಟೆಗಳ ಕಾಲ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸಲಾಗಿದೆ.

ಈ ಅಧಿವೇಶನದಲ್ಲಿ ಇತ್ತೀಚೆಗೆ ನಿಧನ ಹೊಂದಿದ ಮಾಜಿ ಸಚಿವರಾಗಿದ್ದ ಶ್ರೀ ಹಾರನಹಳ್ಳಿ ರಾಮಸ್ವಾಮಿ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎಂ. ಇದಿನಬ್ಬ, ಶ್ರೀ ವಿ. ವಾಸುದೇವ, ಶ್ರೀ ಜಿ. ಶಂಕರೇಗೌಡ, ಶ್ರೀ ಎಂ. ಬಿ. ದಿವಟರ್, ಶ್ರೀ ಬಿ. ಪಿ. ಗಂಗಾಧರ್, ಶ್ರೀ ಪ್ರಭಾಕರರಾವ್ ತೇಲ್ಕರ್, ಶ್ರೀ ರಾಜಾ ಅಮರಪ್ಪ ನಾಯಕ್ ಹಾಲಿ ವಿಧಾನ ಪರಿಷತ್ತಿನ ಹಾಗೂ ಸದಸ್ಯರಾದ ಶ್ರೀ ಬಿ. ಟಿ. ಚನ್ನಬಸಪ್ಪ ಮತ್ತು ಖ್ಯಾತ ಹಿಂದೂಸ್ತಾನಿ ಗಾಯಕಿ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯೆಯಾಗಿದ್ದ ಡಾ: ಗಂಗೂಬಾಯಿ ಹಾನಗಲ್ ಅವರುಗಳು ನಿಧನ ಹೊಂದಿರುವ ಬಗ್ಗೆ ಮತ್ತು 1999ರ ಮೇ–ಜುಲೈನಲ್ಲಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಮಡಿದ ವೀರಯೋಧರ ಸ್ಮರಣಾರ್ಥ ಸದನದಲ್ಲಿ ಸಂತಾಪ ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ.

2009–10ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಎರಡು ದಿನ ಚರ್ಚೆ ನಡೆದು ದಿನಾಂಕ: 29–07–2009ರಂದು ಮಾನ್ಯ ಮುಖ್ಯಮಂತ್ರಿ ಯವರ ಉತ್ತರದೊಂದಿಗೆ ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಕ್ತಾಯ ಗೊಳಿಸಿ ಸದನವು ಅನುದಾನ ಬೇಡಿಕೆಗಳಲ್ಲಿನ ಮೊತ್ತಕ್ಕೆ ಅನುಮೋದನೆ ನೀಡಿರುತ್ತದೆ. ಅಲ್ಲದೆ ದಿನಾಂಕ: 28–07–2009ರಂದು 2009–10ನೇ ಸಾಲಿನ ಪೂರಕ ಅಂದಾಜು (ಒಂದನೇ ಕಂತು)ಗಳನ್ನು ಸದನದಲ್ಲಿ ಮಂಡಿಸಲ್ಪಟ್ಟು ದಿನಾಂಕ: 29–07–2009 ರಂದು ಅಂಗೀಕರಿಸಲ್ಪಟ್ಟಿರುತ್ತದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ದಿನಾಂಕ: 31–03–2008ರ ಅಂತ್ಯದವರೆಗಿನ ಪಂಚಾಯತ್ ರಾಜ್ ಸಂಸ್ಥೆಗಳ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ.

ವಿಧಾನಮಂಡಲದ ವಿವಿಧ ಸಮಿತಿಗಳನ್ನು ರಚಿಸುವ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಮೂರು ಜನ ಸದಸ್ಯರನ್ನು ಹಾಗೂ ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಇಬ್ಬರು ಸದಸ್ಯರನ್ನು ನಾಮನಿರ್ದೇಶನ ಮಾಡಲು ದಿನಾಂಕ : 14–07–2009ರಂದು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿದ ಪ್ರಸ್ತಾವಕ್ಕೆ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಿದೆ.

ಈ ಅಧಿವೇಶನದಲ್ಲಿ ನಿಯಮ 60ರ ಮೇರೆಗೆ, ಹನ್ನೆರಡು ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ ಎಂಟು ಸೂಚನೆಗಳ ಬಗ್ಗೆ ಪ್ರಾಸ್ತಾವಿಕವಾಗಿ ನಂತರ ಅವುಗಳನ್ನು ನಿಯಮ 69ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪಕಾಲಾವಧಿ ಚರ್ಚೆಗೆ ಅವಕಾಶ ಮಾಡಿ ಚರ್ಚಿಸಲಾಗಿರುತ್ತದೆ ಹಾಗೂ ನಿಯಮ 69ರಡಿ ಒಂಭತ್ತು ಅಲ್ಪಕಾಲಾವಧಿ ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ ಏಳು ಸೂಚನೆಗಳನ್ನು ಅಂಗೀಕರಿಸಲಾಗಿದೆ ಅವುಗಳಲ್ಲಿ ಮೂರು ಸೂಚನೆಗಳನ್ನು ಚರ್ಚಿಸಲಾಗಿರುತ್ತದೆ.

ಈ ಅವಧಿಯಲ್ಲಿ ಒಟ್ಟು 1371 ಪ್ರಶ್ನೆಗಳನ್ನು ಸ್ವೀಕರಿಸಿ 1218 ಪ್ರಶ್ನೆಗಳನ್ನು ಅಂಗೀಕರಿಸಿದ್ದು, 1033 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ನಾಲ್ಕು ಅರ್ಧಗಂಟೆ ಕಾಲಾವಧಿ ಚರ್ಚೆಯನ್ನು ಅಂಗೀಕರಿಸಿದ್ದು, ಚರ್ಚೆಯಾಗಿರುವುದಿಲ್ಲ. ಇನ್ನೂರ ಹದಿನೈದು ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 199 ಸೂಚನೆಗಳನ್ನು ಅಂಗೀಕರಿಸಿ 97 ಸೂಚನೆಗಳಿಗೆ ಸರ್ಕಾರದಿಂದ ಉತ್ತರ ಪಡೆದಿದ್ದು, ಆ ಪೈಕಿ 13 ಸೂಚನೆಗಳು ಸದನದಲ್ಲಿ ಚರ್ಚೆಯಾಗಿರುತ್ತವೆ ಹಾಗೂ 16 ಸೂಚನೆಗಳು ತಿರಸ್ಕೃತವಾಗಿರುತ್ತವೆ.

ಸದರಿ ಅವಧಿಯಲ್ಲಿ ಅಧ್ಯಾದೇಶ, ಅಧಿಸೂಚನೆ ಮತ್ತು ವಾರ್ಷಿಕ ವರದಿಗಳು ಸೇರಿ ಒಟ್ಟು 143 ಕಾಗದಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ನಿಯಮ 351 ರಡಿಯಲ್ಲಿ 120 ಸೂಚನೆಗಳನ್ನು ಸ್ವೀಕರಿಸಿ ಅಂಗೀಕರಿಸಲಾಗಿದೆ.

ಧನವಿನಿಯೋಗ ವಿಧೇಯಕವು ಸೇರಿದಂತೆ ಒಟ್ಟು 17 ವಿಧೇಯಕ ಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ.

ಕರ್ನಾಟಕ ವಿಧಾನಮಂಡಲದ 2008–09ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಮೂರು ಮತ್ತು ನಾಲ್ಕನೇ ವರದಿಗಳನ್ನು, ಸಾರ್ವ ಜನಿಕ ಉದ್ಯಮಗಳ ಸಮಿತಿಯ ನೂರಹದಿನೇಳು ಮತ್ತು ನೂರಹದಿನೆಂಟನೇ ವರದಿಗಳನ್ನು, 2005–06ನೇ ಸಾಲಿನ ಅರ್ಜಿಗಳ ಸಮಿತಿಯ ಗ್ರಾಮೀಣಾ ಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ ಎರಡನೇ ವರದಿಗೆ ಅನುಸರಣಾ ವರದಿಯನ್ನು, 2008–09ನೇ ಸಾಲಿನ ಅಂದಾಜುಗಳ ಸಮಿತಿಯ ಮೊದಲನೇ ವರದಿಯನ್ನು ಹಾಗೂ ಖಾಸಗಿ ಸದಸ್ಯರುಗಳ ನಿರ್ಣಯಗಳ ಸಮಿತಿಯ ಮೊದಲನೆಯ ವರದಿಯನ್ನು ಸದನಕ್ಕೆ ಒಪ್ಪಿಸಲಾಗಿದೆ. ಬೆಳಗಾಂ ತಾಲ್ಲೂಕಿನ ಕಂಗ್ರಾಳಿ ಬಿಕೆ ಗ್ರಾಮದ ಸರ್ವೆ ನಂ:36/1ರಲ್ಲಿನ 8 ಎಕರೆ 31 ಗುಂಟೆ ಕ್ಷೇತ್ರವನ್ನು ಕೆ.ಐ.ಎ.ಡಿ.ಬಿ.ಯಿಂದ ಮರಳಿ ಪಡೆದು ಭೂ ಮಾಲೀಕರಿಗೆ ಹಸ್ತಾಂತರಿಸುವ ಬಗ್ಗೆ ಅರ್ಜಿಯನ್ನು ಸದನಕ್ಕೆ ಒಪ್ಪಿಸಲಾಗಿದೆ. ಸದನದ ಕಾರ್ಯಕಲಾಪದಲ್ಲಿ ಭಾಗವಹಿಸಿ ಸಹಕರಿಸಿದಂಥ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಮಾನ್ಯ ಉಪ ಸಭಾಧ್ಯಕ್ಷರಿಗೆ, ಜನತಾ ದಳ (ಎಸ್) ಶಾಸಕಾಂಗ ಪಕ್ಷದ ನಾಯಕರಿಗೆ ಸದನದ ಎಲ್ಲಾ ಮಾನ್ಯ ಸದಸ್ಯರಿಗೆ, ಸದನದ ಕಾರ್ಯಕಲಾಪಗಳನ್ನು ಮಾಧ್ಯಮದಲ್ಲಿ ಪ್ರಸಾರ ಮಾಡಲು ಹಾಗೂ ಪತ್ರಿಕೆಗಳಲ್ಲಿ ಪ್ರಕಟಿಸಲು ಸಹಕರಿಸಿದ ಎಲ್ಲಾ ಮಾಧ್ಯಮ ಮತ್ತು ಪತ್ರಿಕಾ ಪ್ರತಿನಿಧಿಗಳಿಗೆ ಸರ್ಕಾರದ ವಿವಿಧ ಇಲಾಖೆಯು ಅಧಿಕಾರಿ:ನೌಕರರ ವರ್ಗದವರಿಗೆ, ಕರ್ನಾಟಕ ವಿಧಾನ ಸಭೆ ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ತಾವು ಇಷ್ಟೊಂದು ಒಳ್ಳೆ ರೀತಿಯಲ್ಲಿ ಸದನವನ್ನು ನಡೆಸುವುದಕ್ಕೆ ಸಹಕಾರವನ್ನು ಕೊಟ್ಟಿದ್ದೀರಿ. ವಿರೋಧ ಪಕ್ಷದ ನಾಯಕರೂ ಸಹಕಾರ ಕೊಟ್ಟಿದ್ದಾರೆ. ನಿಮಗೆಲ್ಲರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ನಮಗೆ ಇನ್ನೂ ಸದನ ನಡೆಸಬೇಕೆಂದು ಇತ್ತು. ತಾವು 15 ದಿವಸಗಳ ಕಾಲ ಕುಳಿತುಕೊಂಡು, ಉಪಾಧ್ಯಕ್ಷರು ತಾವು ಬಹಳ ಚೆನ್ನಾಗಿ ಸದನವನ್ನು ನಡೆಸಿದ್ದೀರಿ. ಅನೇಕ

ವಿಚಾರಗಳಲ್ಲಿ ಒಂದೊಂದು ಸಲ ಮನಸ್ಸಿಗೆ ನೋವಾಗುವ ರೀತಿಯಲ್ಲಿ ಮಾತುಗಳು ಆಗಬಹುದು. ಆದರೂ ತಾವು ಅದನ್ನು ಬಹಳ ಸ್ಪೋರ್ಟಿವ್ ಆಗಿ ತೆಗೆದುಕೊಂಡು ಬಹಳ ನಗುನಗುತ್ತಾ ಸದನವನ್ನು ನಡೆಸಿಕೊಟ್ಟಿದ್ದೀರಿ. ಸರ್ಕಾರ ಸಹ ಇನ್ನೂ ಹೆಚ್ಚು ದಿವಸ ಕೊಟ್ಟಿದ್ದರೆ ಹೆಚ್ಚು ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಇನ್ನು ಮುಂದೆ ಹೆಚ್ಚು ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶವಾಗಬೇಕು. ವರ್ಷದಲ್ಲಿ ಕನಿಷ್ಠ ಪಕ್ಷ 60 ದಿವಸ ಸದನ ನಡೆಸಬೇಕೆಂದು ನಾವುಗಳೇ ಕಾನೂನು ಮಾಡಿದ್ದೇವೆ. Law makers, law breakers ಆಗಬಾರದು. ಮುಂದೆ 60 ದಿವಸ ಸದನ ನಡೆಯುವಂತೆ ನೋಡಿಕೊಳ್ಳಬೇಕು. ತಾವು ಮತ್ತು ಸರ್ಕಾರ ಅದಕ್ಕೆ ಸಹಕಾರ ಕೊಡಬೇಕು. ಈ 15 ದಿವಸಗಳಲ್ಲಿ ಎಲ್ಲಾ ರೀತಿಯಲ್ಲಿ ಸಹಕಾರ ನೀಡಿದಂಥ ತಮಗೆ, ಎಲ್ಲಾ ಸಚಿವರುಗಳಿಗೆ, ಎಲ್ಲಾ ಮಾನ್ಯ ಸದಸ್ಯರುಗಳಿಗೆ ಧನ್ಯವಾದಗಳನ್ನು ಹೇಳಿ ತಮಗೆ ಮತ್ತೊಮ್ಮೆ ಧನ್ಯವಾದಗಳು.

ಶ್ರೀ ಹೆಚ್.ಡಿ.ರೇವಣ್ಣ (ಜೆ.ಡಿ.ಎಸ್. ಶಾಸಕಾಂಗ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಧ್ಯಕ್ಷತೆಯಲ್ಲಿ ವಿರೋಧ ಪಕ್ಷವವರಿಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೀರಿ ಅದಕ್ಕೆ ಮೊದಲನೆಯದಾಗಿ ಧನ್ಯವಾದಗಳು. ಅದರ ಜೊತೆಗೆ ನಿಯಮ 69ರಲ್ಲಿ ಇರಬಹುದು, ಗಮನ ಸೆಳೆಯುವ ಸೂಚನೆಯಲ್ಲಿ ಇರಬಹುದು ಬಾಕಿ ಉಳಿದಿರುವುದನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಲು ಅವಕಾಶ ಕೊಡಬೇಕು. ಮಾನ್ಯ ಸಭಾನಾಯಕರು 15 ದಿವಸ ಈ ಸದನವನ್ನು ನಡೆಸಿದ್ದಾರೆ. ಈ ವರ್ಷವೇ ಅವರು 60 ದಿವಸ ನಡೆಸೋಣವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಅವರನ್ನು ಅಭಿನಂದಿಸುತ್ತೇನೆ. ಕಾನೂನು ಸಚಿವರಿಂದ ಹಿಡಿದು ಎಲ್ಲಾ ಸಚಿವರನ್ನು, ವಿರೋಧ ಪಕ್ಷದ ನಾಯಕರನ್ನು, ಪತ್ರಿಕಾ ಮಿತ್ರರೆಲ್ಲರಿಗೂ ಮಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್.ಎ. ಹ್ಯಾರೀಶ್ : ಮಾನ್ಯ ಅಧ್ಯಕ್ಷರೆ, ಹೊಸದಾಗಿ ಬಂದಿರುವ ಸದಸ್ಯರುಗಳಿಗೆ ಮಾತನಾಡಲು ಅವಕಾಶ ಲಭ್ಯವಾಗಿಲ್ಲ. ಆದ್ದರಿಂದ ಮುಂದಿನ ಬಾರಿ ಸದನ ನಡೆಯುವಾಗ ಕೊನೆಯ ಪಕ್ಷ ಹತ್ತತ್ತು ನಿಮಿಷ ಎಲ್ಲಾ ಸದಸ್ಯರಿಗೂ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವನ್ನು ರಾತ್ರಿ 10 ಗಂಟೆ 55 ನಿಮಿಷಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು)